(ಪೊಲೀಸ್ ಇಲಾಖೆ)
**ಪೊಲೀಸ್ ಆಯುಕ್ತರ ಕಛೇರಿ,**
**ಮೈಸೂರು ನಗರ , ನಜರ್‌ಬಾದ್, ಮೈಸೂರು-570010**
**ದೂರವಾಣಿ ಸಂಖ್ಯೆ:0821-2418300/304**

ಸಂಖ್ಯೆ:6/ಸಿಬ್ಬಂದಿ(5)/ಸಿಪಿಸಿ-ನೇ.ಕಾ/2020-21 ದಿನಾಂಕ: 08-06-2022.
ಓಬಿ ಸಂಖ್ಯೆ: 83/2022-23

## :: ನೇಮಕಾತಿ ಆದೇಶ ::

ವಿಷಯ: ಮೈಸೂರು ನಗರ ಘಟಕದ ಸಿವಿಲ್ ಪೊಲೀಸ್ ಕಾನ್ಸ್‌ಟೆಬಲ್ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಅಧಿಸೂಚನೆ ಪತ್ರ ಸಂ.01/ನೆಮಕಾತಿ-4/2021-22 ದಿನಾಂಕ: 21-05-2021 ಮತ್ತು 18-08-2021.
2. ಎ.ಡಿ.ಜಿ.ಪಿ, ನೇಮಕಾತಿ, ಬೆಂಗಳೂರು ರವರ ಪತ್ರ ಸಂ.01/ನೇಮಕಾತಿ-4/2021-22 ದಿನಾಂಕ 18-01-2022
3. ಸಿಪಿಸಿ (ಪುರುಷ) (ಮಹಿಳೆ) ಮತ್ತು ಸೇವಾ ನಿರತ ಹುದ್ದೆಯ ತಾತ್ಕಾಲಿಕ ಆಯ್ಕೆಪಟ್ಟಿ ಸಮಸಂಖ್ಯೆ ದಿನಾಂಕ 20-01-2022 ಮತ್ತು 05-04-2022.
4. ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ (ಎಸ್‌ಪಿಎಲ್) 04/ಪಿಇಟಿ/2005 ದಿನಾಂಕ 31-03-2006
5. ಸರ್ಕಾರದ ಆದೇಶ ಸಂಖ್ಯೆ ಒಇ 130 ಪೊಸಿ 2017 ದಿನಾಂಕ 18-09-2017

* * *

ಪೊಲೀಸ್ ಕಮೀಷನರೇಟ್, ಮೈಸೂರು ನಗರ ಘಟಕದಲ್ಲಿ ಖಾಲಿ ಇರುವ 120 ಸಂಖ್ಯೆಯ ನಾಗರೀಕ ಪೊಲೀಸ್ ಕಾನ್ಸ್‌ಟೇಬಲ್ (ಪುರುಷ) ಮತ್ತು 41 ಸಂಖ್ಯೆಯ ನಾಗರೀಕ ಪೊಲೀಸ್ ಕಾನ್ಸ್‌ಟೇಬಲ್ (ಮಹಿಳೆ) ಹುದ್ದೆಗಳಿಗೆ ದಿನಾಂಕ 24-10-2021 ರಂದು ಮತ್ತು 19 ಸಂಖ್ಯೆ ನಾಗರೀಕ ಪೊಲೀಸ್ ಕಾನ್ಸ್‌ಟೇಬಲ್ (ಸೇವಾನಿರತ) ಹುದ್ದೆಗಳಿಗೆ ದಿನಾಂಕ 21-11-2021 ರಂದು ಲಿಖಿತ ಪರೀಕ್ಷೆಗಳನ್ನು ನಡೆಸಿ, 1:5 ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದಿನಾಂಕ 03-01-2022, 04-01-2022 ಮತ್ತು 14-01-2022 ರಂದು ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯನ್ನು ನಡೆಸಲಾಗಿದ್ದು, ಅರ್ಹರಾಗಿರುವ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು ಮತ್ತು ಮೀಸಲಾತಿ ಆಧಾರದ ಮೇರೆಗೆ ಹಾಗೂ ಉಲ್ಲೇಖದಲ್ಲಿರುವ ಆದೇಶ ಹಾಗೂ ಪತ್ರಗಳಿಗನುಸಾರವಾಗಿ ನೇರ ನೇಮಕಾತಿ ಮೂಲಕ ನೀವು ಸಿವಿಲ್ ಪೊಲೀಸ್ ಕಾನ್ಸ್‌ಟೆಬಲ್ ಹುದ್ದೆಗೆ ಆಯ್ಕೆಯಾಗಿದ್ದು **ರೂ.23500-550-24600-600-27000-650-29600-750-32600-850-36000-950-39800-1100-46400-1250-47650** ರ ವೇತನ ಶ್ರೇಣಿಯಲ್ಲಿ ಲಭ್ಯವಾಗುವ ಸಂಬಳ ಹಾಗೂ ಇತರೆ ಭತ್ಯೆಗಳಿಗೆ ಅರ್ಹವಾಗುವಂತೆ ಹಾಗೂ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಮತ್ತು ಇತರೆ ಘನ ನ್ಯಾಯಾಲಯಗಳ ಮುಂದೆ ಉದ್ಭವಿಸುವ ವ್ಯಾಜ್ಯಗಳ ಬಗ್ಗೆ ನೀಡುವ ತೀರ್ಪುಗಳು ಮತ್ತು **ಅಂತಿಮ ಆಯ್ಕೆಪಟ್ಟಿಗೆ ಒಳಪಟ್ಟಿರುವ ಷರತ್ತಿನ ಮೇರೆಗೆ ಹಾಗೂ ಯಾವುದೇ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವುದು ಕಂಡುಬಂದಲ್ಲಿ ಸೇವೆಯಿಂದ ವಜಾ ಮಾಡುವ ನಿಬಂಧನೆಯ ಮೇರೆಗೆ** ನಿಮ್ಮನ್ನು ಸಿವಿಲ್ ಪೊಲೀಸ್ ಕಾನ್ಸ್‌ಟೆಬಲ್ ಹುದ್ದೆಗೆ ಈ ಘಟಕದಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ.

ನೀವು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಎರಡೂವರೆ ವರ್ಷಗಳ ಕಾಲ ಪ್ರೊಬೆಷನರಿ ಅವಧಿ (Probationary Period) ಯನ್ನು ಪೂರೈಸಬೇಕಾಗಿದೆ. ಈ ಪ್ರೊಬೆಷನರಿ ಅವಧಿಯಲ್ಲಿ ಯಾವುದೇ ರೀತಿಯ ಅನರ್ಹತೆ ಕಂಡುಬಂದರೆ ಯಾವುದೇ ಕಾರಣ ನೀಡದೆ ನಿಮ್ಮನ್ನು ಕೆ.ಸಿ.ಎಸ್ ಪ್ರೊಬೆಷನರಿ ನಿಯಮಗಳು 1977 ರ ಪ್ರಕಾರ ಕೆಲಸದಿಂದ ತೆಗೆದು ಹಾಕಲಾಗುವುದು.



Scanned with CamScanner

ನೀವು **ದಿನಾಂಕ:22-06-2022** ರೊಳಗೆ ನೇಮಕಾತಿ ಪ್ರಾಧಿಕಾರಿ ರವರ ಬಳಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು. ನಿಗದಿತ ಸಮಯದೊಳಗೆ ಹಾಜರಾಗದಿದ್ದಲ್ಲಿ ಯಾವುದೇ ಮುನ್ಸೂಚನೆಯನ್ನು ನೀಡದೆ ನಿಮ್ಮ ನೇಮಕಾತಿಯನ್ನು ರದ್ದುಪಡಿಸಲಾಗುವ ಅಂತಿಮ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.

**ನೀವು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಈ ಕೆಳಕಂಡ ಮೂಲ ದಾಖಲಾತಿಗಳನ್ನು ತಪ್ಪದೇ ಹಾಜರುಪಡಿಸಬೇಕು.**

1. ಇತ್ತೀಚಿನ ಪಾಸ್‌ಪೋರ್ಟ್ ಮತ್ತು ಸ್ಟಾಂಪ್ ಅಳತೆಯ ತಲಾ ನಾಲ್ಕು ಭಾವಚಿತ್ರಗಳು
2. ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ
3. ಸರ್ಕಾರಿ ಆಸ್ಪತ್ರೆಯ ಸರ್ಜನ್‌ರವರಿಂದ ಪಡೆದ ವೈದ್ಯಕೀಯ (ಫಿಟ್‌ನೆಸ್) ಪ್ರಮಾಣ ಪತ್ರ (ರಕ್ತದ ಗುಂಪಿನೊಂದಿಗೆ).
4. ಆಧಾರ್ ಕಾರ್ಡ್ & ಪ್ಯಾನ್ ಕಾರ್ಡ್
5. ಅಭ್ಯರ್ಥಿಯ ಹೆಸರಿನಲ್ಲಿರುವ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನ ಪಾಸ್‌ಪುಸ್ತಕ
6. ಇಲಾಖೆಯಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಆಯ್ಕೆಗೊಂಡಿರುವ ಹುದ್ದೆಯಲ್ಲೇ ಸಲ್ಲಿಸುವುದಾಗಿ ರೂ.500/- ಗಳ ಛಾಪಾ ಕಾಗದದಲ್ಲಿ ರೂ.1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಗಳ ಮುಚ್ಚಳಿಕೆ ಪ್ರಮಾಣ ಪತ್ರ (Indemnity Bond).

| SlNo | APPL NO<br>ROLL NO<br>DOB<br>Gender | Name<br>Aadhar No. | Photo Signature & thumb | ADDRESS<br>MOBILE NO. | Selected Category |
|---|---|---|---|---|---|
| 1. | 1200543<br>9635651<br>25-02-1996<br>Male | SUMAN A S<br>245764767170 |  | NAMADHARIGOWDA STREET,<br>ANTHARASANTHE VILLAGE & POST, H D KOTE(TQ)<br>MYSURU - 571114<br>9964547468 | GM_RUR |
| 2. | 1200828<br>9631983<br>06-06-1998<br>Male | SRIGIRI B S<br>290546460390 |  | NO 12, NOWKARARA BADAVANE ABBUR,<br>PERIYAPATNA,<br>MYSURU- 571107<br>9449489113 | 2A_OTH |

**ಈ ನೇಮಕಾತಿ ಆದೇಶವು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

1. ಅಭ್ಯರ್ಥಿಗಳ ಆಯ್ಕೆ ಸಂಬಂಧವಾಗಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅಥವಾ ಇತರೆ ನ್ಯಾಯಾಲಯಗಳಿಂದ ಹೊರಬೀಳುವ ತೀರ್ಪುಗಳ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರ ಹೊಂದಿರುತ್ತದೆ.
2. ಕೆ.ಸಿ.ಎಸ್.ಆರ್ ನಿಯಮಗಳ ಪ್ರಕಾರ ನಿಗದಿಪಡಿಸಿದ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಲ್ಲಿ, ಯಾವುದೇ ನ್ಯಾಯಾಲಯವು ನಿಮ್ಮ ನೇಮಕಾತಿಯನ್ನು ಅನೂರ್ಜಿತ ಮತ್ತು ಪರಿಣಾಮ ಶೂನ್ಯ / ಅನಿಯಮಿತಗೊಳಿಸಿದಲ್ಲಿ, ಯಾವುದೇ ಕಾರಣಗಳಿಂದ ಆಯ್ಕೆಗೊಂಡ ಹುದ್ದೆಗೆ ಅನರ್ಹರಾಗಿ ಕಂಡುಬಂದಲ್ಲಿ, ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮ 1977 ರ ಪ್ರಕಾರ ಯಾವುದೇ ಮುನ್ಸೂಚನೆಯನ್ನು ನೀಡದೇ ನಿಮ್ಮನ್ನು ಸೇವೆಯಿಂದ ವಿಮುಕ್ತಿಗೊಳಿಸಲಾಗುವುದು.



Scanned with CamScanner

3. ಈ ನೇಮಕಾತಿ ಆದೇಶವು ತಾತ್ಕಾಲಿಕವಾಗಿದ್ದು, ನೇಮಕಾತಿಯ ನಂತರ ಅಭ್ಯರ್ಥಿಯ ಗುಣ ಹಾಗೂ ಚಾರಿತ್ರ್ಯದ ಬಗ್ಗೆ ಪ್ರತಿಕೂಲ ವರದಿ ಬಂದರೆ ಅಥವಾ ಅಭ್ಯರ್ಥಿಗಳು ಸಲ್ಲಿಸಿದ ಮೂಲ ದಾಖಲಾತಿಗಳು ನಕಲು ಅಥವಾ ಸುಳ್ಳು ಮಾಹಿತಿ ನೀಡಿ ಹಾಜರುಪಡಿಸಿದ ದಾಖಲೆಗಳೆಂಬುದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಅವರನ್ನು ಸೇವೆಯಿಂದ ವಜಾ ಮಾಡುವುದರ ಜೊತೆಗೆ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.
4. ಈ ನೇಮಕಾತಿಯು ಪಿಂಚಣಿಗೆ ಸಂಬಂಧಿಸಿದಂತೆ ಉಲ್ಲೇಖ-4ರಲ್ಲಿ ಕಾಣಿಸಿರುವ ಸರ್ಕಾರದ ಆದೇಶ ಹಾಗೂ ಮುಂದಿನ ದಿನಗಳಲ್ಲಿ ಆಗಿಂದಾಗ್ಗೆ ಹೊರಡಿಸುವ ಸರ್ಕಾರಿ ಆದೇಶಗಳಿಗೆ ಒಳಪಟ್ಟಿರುತ್ತದೆ.
5. ಈ ಅವಧಿಯಲ್ಲಿ 8 (ಎಂಟು) ತಿಂಗಳ ಬುನಾದಿ ತರಬೇತಿ ಪಡೆಯಬೇಕಾಗಿರುತ್ತದೆ. ಹಾಗೂ ಇವರ ಖಾಯಂಪೂರ್ವ ಪರೀಕ್ಷಾರ್ಥ ಅವಧಿಯನ್ನು ಘೋಷಿಸುವ ಮೊದಲು ಸಿಪಿಸಿ ಹುದ್ದೆಗೆ ತರಬೇತಿ ಅವಧಿಯಲ್ಲಿ ನಿಯಮಾವಳಿಗಳಲ್ಲಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ, ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಹಾಗೂ ಇಲಾಖಾ ಪರೀಕ್ಷೆಗಳನ್ನು ಕಡ್ಡಾಯವಾಗಿ ಉತ್ತೀರ್ಣರಾಗಬೇಕಾಗುತ್ತದೆ.
6. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಮಯ ಯಾವುದೇ ಪ್ರಯಾಣ ಭತ್ಯೆಗೆ ಅರ್ಹರಿರುವುದಿಲ್ಲ.
7. ಅಭ್ಯರ್ಥಿಗಳ ಜೇಷ್ಠತೆಯನ್ನು ಕೆ.ಸಿ.ಎಸ್ (ಜೇಷ್ಠತೆ) ನಿಯಮಗಳು 1957ರ ನಿಯಮ 5(2) ರನ್ವಯ ಸಿವಿಲ್ ಪೊಲೀಸ್ ಕಾನ್ಸ್‌ಟೆಬಲ್ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯ ಅಂಕಗಳ ಅನುಸಾರ ಪರಿಗಣಿಸಲಾಗುವುದು.
8. ಕರ್ತವ್ಯಕ್ಕೆ ವರದಿ ಮಾಡಿಕೊಂಡ ಕೂಡಲೇ ಕರ್ನಾಟಕ ರಾಜ್ಯ ವಿಮಾ ಇಲಾಖೆಯಲ್ಲಿ ಕನಿಷ್ಠ ರೂ.2200/- ಗಳಿಗೆ ಕಡ್ಡಾಯ ವಿಮಾದಾರರಾಗಬೇಕು ಮತ್ತು ಇ.ಜಿ.ಐ.ಎಸ್ ರೂ.76/- ಮೊದಲ ಕಂತನ್ನು ಕಡ್ಡಾಯವಾಗಿ ಪಾವತಿ ಮಾಡಬೇಕು.

ಪೊಲೀಸ್ ಆಯುಕ್ತರು ಹಾಗೂ
ಅಧ್ಯಕ್ಷರು ಸಿಪಿಸಿ ಹುದ್ದೆಯ ನೇಮಕಾತಿ ಪ್ರಾಧಿಕಾರ
ಮೈಸೂರು ನಗರ.

ಗೆ.

ಮೇಲ್ಕಂಡ ಅಭ್ಯರ್ಥಿಗಳಿಗೆ (ನೋಂದಣಿ ಅಂಚೆ ಸ್ವೀಕೃತಿ ಮೂಲಕ)

<u>ಪ್ರತಿಯನ್ನು ವಂದನೆಗಳೊಡನೆ</u> ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ

<u>ಪ್ರತಿಯನ್ನು :</u>

1. ಉಪ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ, ಮೈಸೂರು ನಗರ.
2. ಉಪ ಪೊಲೀಸ್ ಆಯುಕ್ತರು, ಕೇಂದ್ರಸ್ಥಾನ, ಸಂಚಾರ ಮತ್ತು ಅಪರಾಧ, ಮೈಸೂರು ನಗರ.
3. ಉಪ ಪೊಲೀಸ್ ಆಯುಕ್ತರು, ಸಿಎಆರ್, ಮೈಸೂರು ನಗರ.
4. ವೇತನ ಶಾಖೆ-1, ವೇತನ ಶಾಖೆ-3, ಸಿಬ್ಬಂದಿ-2, ಓಬಿ, ಸೇವಾಪುಸ್ತಕ, ಸಂಗ್ರಹ, ರಹಸ್ಯ ಹಾಗೂ ಪೊಲೀಸ್ ಐ.ಟಿ ಶಾಖೆಗಳಿಗೆ ಸೂಕ್ತಕ್ರಮಕ್ಕಾಗಿ.



Scanned with CamScanner